ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಸಿಸಿ ನಂ **106/2025**

ಸಿ ಡಬ್ಲ್ಯೂಃ**-2** /ಪಿ ಡಬ್ಲ್ಯು ಃ**-2**

ಸಾಕ್ಷಿದಾರರ ಹೆಸರು ಃ ಸಿ ಟಿ ಶಿವಕುಮಾರ
ತಂದೆಯ ಹೆಸರು ಃ ಲೇಟ್ ಸಿ ಬಿ ತಿಮ್ಮೇಗೌಡ
ವಯಸ್ಸು ಃ **52** ವರ್ಷ
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ಚಿಕ್ಕಗ್ರಹಾರ

ದಿನಾಂಕಃ **24-02-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ 1, 3 ರಿಂದ 5 ರವರ ಪರಿಚಯ ಇರುತ್ತದೆ. ಸಾಕ್ಷಿಗೆ ನಿಪಿ 2 ನ್ನು ತೋರಿಸಲಾಗಿ ನಿಪಿ 2 ರಲ್ಲಿ ಸಾಕ್ಷಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿಯವರ ಸಹಿಯನ್ನು ನಿಪಿ 2 (ಬಿ) ಎಂದು ಗುರುತಿಸಲಾಯಿತು. ನಿಪಿ 2 ರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ 3 ರಿಂದ 11 ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿಕೊಂಡಿದ್ದು, ಪರಿಗಣಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕಃ16.08.2025 ರಂದು ಸಂಜೆ 6.00 ರಿಂದ 7.00 ಗಂಟೆಯ ಅವಧಿಯಲ್ಲಿ ಆಡುವಳ್ಳಿ ಗ್ರಾಮದ ಸ.ನಂ.121/1 ರಲ್ಲಿರುವ ಚಿಕ್ಕಗ್ರಹಾರ ವಾಸಿ ಸಿ ಆರ್ ಅನಿಲ್ ಕುಮಾರ ರವರ ಬಾಬ್ತು ಜಮೀನಿನಲ್ಲಿರುವ ವಾಸದ ಮನೆಯಲ್ಲಿ ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ 3 ರವರ ಸಮಕ್ಷಮ ಪೊಲೀಸರು ಕೃತ್ಯ ಸ್ಥಳದ ಮಹಜರನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರ ಮನೆಯಲ್ಲಿದ್ದ ಗಾಡ್ರೇಜ್ ಬೀರುವಿನಲ್ಲಿ ಇಟ್ಟಿದ್ದ ರೂ.11000 ನಗದು , 5 ಗ್ರಾಂ ತೂಕದ ಬಂಗಾರದ ಉಂಗುರ , ಮನೆಯಲ್ಲಿದ್ದ 21 ಕೆ ಜಿ ತೂಕದ ತಾಮ್ರದ ಹಂಡೆ ಮತ್ತು 2 ಕೊಡಪಾನ , 1 ಗ್ಯಾಸ್ ಸಿಲಿಂಡರ್, 12 ವ್ಯಾಟ್ ಸೋಲಾರ್ ಚಾರ್ಜರ್ ಬ್ಯಾಟರಿ ಹಾಗೂ ಅರ್ಧ ಹೆಚ್ ಪಿ ಕರೆಂಟ್ ಮೋಟಾರನ್ನು ಕಳ್ಳತನ ಮಾಡಿದ್ದು ಆ ಸಂಬಂಧ ನಮ್ಮ ಸಮಕ್ಷಮ ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರನ್ನು ಮಾಡುವ ಕಾಲಕ್ಕೆ ಕೃತ್ಯಕ್ಕೆ ಸಂಬಂಧಿಸಿದ ಬೀಗ ಹಾಗೂ ತುಂಡಾಗಿರುವ ಬೀಗದ ಕೊಂಡಿ ಹಾಗೂ ಸ್ಟೀಲ್ ರಾಡನ್ನು ಮುಂದಿನ ಕ್ರಮಕ್ಕಾಗಿ ನಮ್ಮ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ಮಹಜರು ಮಾಡುವ ಕಾಲಕ್ಕೆ ನಿಪಿ 3 ರಿಂದ 11 ರಂತೆ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಮು ಮಾ 7 ಮತ್ತು 8 ನ್ನು ಪೋಲೀಸರು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ

ಸಮಕ್ಷಮ ನಿಪಿ 2 ರಂತೆ ಅಮಾನತು ಮಹಜರು ಮಾಡಿ ನಾನು ಅದಕ್ಕೆ ಸಹಿ ಮಾಡಿದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎನ್ನುತ್ತಾರೆ.

ಮರು ವಿಚಾರಣೆ ಃ ಇಲ್ಲ ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ